



ಮೊಟ್ಟೆಯ ಹಳದಿ ಲೋಳೆಯಂಥ ರಚನೆಯ 'ಫ್ರೈಡ್ ಎಗ್ಸ್'

ಗಟ್ಟಿಯಾಗಿ ಕಂಡರೂ ಮುರಿಯುವ ಸಾಧ್ಯತೆಯೂ ಇದೆ. 'ದಿ ಗ್ರೇಟ್ ಸ್ಟಾಲಾಕ್‌ಪೈಪ್ ಆರ್ಗನ್' ಎಂಬ ಪ್ರಪಂಚದ ಅತ್ಯಂತ ದೊಡ್ಡದಾದ ಸಂಗೀತ ವಾದ್ಯವು ಮೂರು ಎಕರೆಯ ಲೂರೇ ಕ್ಯಾವರ್ನ್‌ನನ್ನು ಆಕ್ರಮಿಸಿದ್ದು ತೂಗುತಂಗಲನ್ನು ಲಘುವಾಗಿ ತಟ್ಟುವುದರ ಮೂಲಕ ಜೈಲೋಫೋನ್, ಟ್ಯೂನಿಂಗ್ ಫೋರ್ಕ್ ಅಥವಾ ಗಂಟೆಯಂತೆ ಸ್ವರವನ್ನು ಹೊರಡಿಸಬಲ್ಲದು. ಈ ಎಲ್ಲಾ ವಿಶಿಷ್ಟತೆಯನ್ನು ಹೊತ್ತ ಲೂರೇ ಕ್ಯಾವರ್ನ್ಸ್ ಭೂವಿಜ್ಞಾನದಲ್ಲಿ 'ಹಾಲ್ ಆಫ್ ಫೇಮ್' ಎಂದು ಖ್ಯಾತಿ ಪಡೆದಿದೆ.

ಹೋರೇಸ್ ಸಿ. ಹೋವೆ, ಲೂರೇ ಕ್ಯಾವರ್ನ್ಸ್‌ನ ನಕ್ಷೆಯನ್ನು ಸಿದ್ಧಗೊಳಿಸಿ ಅವುಗಳ ರಚನೆಯಾಧಾರಿತವಾಗಿ ನಾಮಕರಣ ಮಾಡಿದ್ದಾರೆ. ಆಯಾ ಜಾಗದ ಅನುಸಾರ ಅವುಗಳನ್ನು ಸುಲಭವಾಗಿ ಗುರುತಿಸಲು ನಾಮಫಲಕಗಳನ್ನು ಹಾಕಲಾಗಿದೆ.

**ಸರಾಸೆನ್ಸ್ ಟೆಂಟ್:** ಆಕರ್ಷಕವಾಗಿ ಇಳಿಬಿಟ್ಟ ಕ್ಯಾಲ್‌ಸೈಟ್ ಪದರಗಳು ಪರದೆಯಂತೆ, ಟೆಂಟಿನಂತೆ ಕಂಡು ಎಂಥವರನ್ನೂ ಬೆರಗುಗೊಳಿಸುತ್ತವೆ.

**ಟೈಟಾನಿಯಾಸ್ ವೇಲ್:** ಶೇಕ್ಸ್‌ಪಿಯರ್‌ನ 'ಮಿಡ್ ಸಮ್ಮರ್ ನೈಟ್ಸ್ ಡ್ರೀಮ್'ನ ಕಾಲ್ಪನಿಕ ಕಥೆಯ ರಾಜಕುಮಾರಿ ಧರಿಸುತ್ತಿದ್ದ ಅರೆಪಾರದರ್ಶಕ ವಸ್ತ್ರದಂತಿದ್ದು, ಇದರ ಮೂಲಕ ಬೆಳಕು ಹಾಯ್ದಾಗ ಸೃಷ್ಟಿಸುವ ಸೌಂದರ್ಯ ಮೋಡಿ ಮಾಡುವಂತಿದೆ.

**ಡಬಲ್ ಕಾಲಮ್:** ನೆಲತೊಂಗಲು ಛಾವಣಿಯೊಂದಿಗೆ ಸೇರಿ ಎರಡು ಬೃಹತ್ ಕಂಬಗಳಾಗಿ ನಿರ್ಮಿತವಾಗಿವೆ. ನೆಲತೊಂಗಲು, ತೂಗುತಂಗಲು ಸಹಸ್ರಾರು ವರ್ಷಗಳಿಂದ ನಿಧಾನಕ್ಕೆ, ಸ್ಥಿರವಾಗಿ ಬೆಳೆದುಕೊಂಡು ಬಂದಿವೆ.

**ಟೋಟೆಮ್ ಪೋಲ್ಸ್:** ಲೂರೇ ಕ್ಯಾವರ್ನ್ಸ್‌ನ ಅತ್ಯಂತ ಎತ್ತರದ ರಚನೆಯಲ್ಲಿ ಇದೂ ಒಂದಾಗಿದ್ದು ಟೋಟೆಮ್ ಪೋಲ್ಸ್‌ನ ಹೋಲಿಕೆಯಂತಿರುವ ಈ ನೆಲತೊಂಗಲು ಸುಮಾರು 47 ಅಡಿಯಿದೆ.

**ಜಯಂಟ್ಸ್ ಹಾಲ್:** ವಿಶಾಲ ಕೊಠಡಿಯಲ್ಲಿರುವ ದೈತ್ಯಾಕಾರದ ನೆಲತೊಂಗಲು, ತೂಗುತೊಂಗಲು ಸ್ವಾರಸ್ಯವೆನಿಸುತ್ತದೆ.

**ಫ್ರೈಡ್ ಎಗ್ಸ್:** ಇದು ಡಿಸ್ಕ್ ಆಕಾರದ ಮಧ್ಯೆ ಗುಳಿಯಂತಿದ್ದು ನೋಡಲು ಫ್ರೈಡ್ ಮೊಟ್ಟೆಯ ಹಳದಿ ಲೋಳೆಯಂತೆ ಅನನ್ಯ ರಚನೆಯಾಗಿದೆ. ಕ್ಯಾಲ್‌ಸೈಟ್ ಹೊಂದಿರುವ ನೀರಿನ ಹನಿಗಳು ಅದಾಗಲೇ ಅಸ್ತಿತ್ವದಲ್ಲಿರುವ ನೆಲತೊಂಗಲಿನ ಮೇಲೆ ಬಿದ್ದಾಗ ಈ ರೀತಿಯ ವಿನ್ಯಾಸವಾಗುತ್ತದೆ.

**ವಿಷಿಂಗ್ ವೆಲ್:** ವಿಷಿಂಗ್ ವೆಲ್‌ನಲ್ಲಿ ಮನಸ್ಸಿನಲ್ಲೇ ಏನಾದರೂ ಬಯಸಿ ನಾಣ್ಯ ಹಾಕಬಹುದು. ಪ್ರತಿವರ್ಷದ ಕೊನೆಯಲ್ಲಿ ಸುಮಾರು ಮೂರು ಅಡಿಯಷ್ಟು ತುಂಬುವ ಈ ಎಲ್ಲಾ ನಾಣ್ಯಗಳನ್ನು ದಾನ ಮಾಡಲಾಗುತ್ತದೆ.

**ಪ್ಲುಟೋಸ್ ಗೋಸ್ಟ್:** ಬಣ್ಣಗೆಟ್ಟು ಪ್ರೇತಕಳೆ ಹೊಂದಿರುವ ಈ ರಚನೆ ವೈವಿಧ್ಯಮಯ ಆಕಾರವನ್ನು ಎತ್ತಿಹಿಡಿದಿದೆ.

ಲೂರೇ ಕ್ಯಾವರ್ನ್ಸ್‌ನಂತಹ ಗುಹೆ ಪ್ರಪಂಚದ ಇನ್ಯಾವ ಜಾಗದಲ್ಲೂ ಕಂಡುಬಂದಿಲ್ಲ ಎನ್ನಲಾಗಿದೆ. ಈ ಗುಹೆ, ಸಮ್ಮೋಹನಗೊಳಿಸುವಂತಹ ರಚನೆಗೆ ಖ್ಯಾತಿ ಹೊಂದಿದ್ದು ಲಕ್ಷಾಂತರ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in